# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/373/13-14

ದಿನಾಂಕ :05-08-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ಹೆಚ್. ಮಂಜುನಾಥ ಗೌಡ ತಂದೆ ಭೀಮನಗೌಡ, ಕಾಫಿಬೋರ್ಡ್ ಕಾಂಪವಂಡ್, ಗಾಂಧಿನಗರ, ಮೋಕಾ ರಸ್ತೆ, ಬಳ್ಳಾರಿ<br><br>**(ಶ್ರೀ ಎಸ್. ಜಾವೇದ್ ಪಟೇಲ್, ವಕೀಲರು, ಬಳ್ಳಾರಿ)** | (1) ತಹಶೀಲ್ದಾರರು, ಬಳ್ಳಾರಿ<br>(2) ಕಂದಾಯ ನಿರೀಕ್ಷಕರು, ಬಳ್ಳಾರಿ<br>(3) ಗ್ರಾಮಲೆಕ್ಕಾಧಿಕಾರಿ, ಕೊಳಗಲ್ಲು |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಕೊಳಗಲ್ಲು | 637/A ಪೈಕಿ | 0.05.50 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ಬಳ್ಳಾರಿ ಇವರ ಎಂ ಆರ್ ನಂ 743/96-97 ದಿನಾಂಕ 10-06-1997 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ 09-10-2015 , 05-08-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ಮುಖಾಂತರ ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲೂಕಿನ ಕೊಳಗಲ್ಲು ಗ್ರಾಮದ ಸ.ನಂ 637/A ಪೈಕಿ ವಿಸ್ತೀರ್ಣ: 0.05.50 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಬಳ್ಳಾರಿ ಇವರ ಎಂ ಆರ್ ನಂ 743/96-97 ದಿನಾಂಕ 10-06-1997 ರಲ್ಲಿ ವ್ಯವಸಾಯ ಜಮೀನನ್ನು ಭೂ ಪರಿವರ್ತನೆ ಮಾಡಿಸದೆ ಪ್ಲಾಟ್ ಗಳಾಗಿ ಮಾರಟಮಾಡಿರುತ್ತಾರೆಂದು ಹಕ್ಕುಬದಲಾವಣೆಯನ್ನು ಗೈರುಮಮಜೂರು ಮಾಡಿರುತ್ತಾರೆ , ಸದರಿ ಗೈರು ಮಂಜೂರು ಆದೇಶದ ವಿರುದ್ದ ವಾದಿಗಳು ಮೇಲ್ಮನವಿ ಸಲ್ಲಿಸಿರುತ್ತಾರೆ.

ವಾದಿಗಳ ಸದರಿ ವಿವಾದಾಸ್ಪದ ಜಮೀನನ್ನು ನೊಂದಾಯಿತ ಕ್ರಯಪತ್ರ 608/97-98 ದಿನಾಂಕ 02-05-1997 ರಂದು ಶ್ರೀ ಪರಸಪ್ಪ ಸಿ.ದಲ್ಲಾಳಿ ತಂದೆ ಚಂದಪ್ಪ ದಲ್ಲಾಳಿ ಇವರಿಂದ ಕ್ರಯಕ್ಕೆ ಪಡೆದಿದ್ದು, ಕ್ರಯಪತ್ರದನ್ವಯ ಹಕ್ಕುಬದಲಾವಣೆಮಾಡಿಕೊಡುವಂತೆ ಕೋರಿರುತ್ತಾರೆ. ಮುಂದುವರೆದು ಪ್ರಕರಣದಲ್ಲಿನ ಲಭ್ಯದಾಖಲೆಗಳನ್ನು ಪರಿಶೀಲಿಸಲಾಗಿ , ಕರ್ನಾಟಕ ಭೂಕಂದಾಯ ಕಾಯ್ದೆ ಕಲಂ 95 ರ ಉಲ್ಲಂಘನೆ ಮಾಡಿ ಕೃಷಿಜಮೀನ್ನು ಅನ್ಯತಾ ಕಾರ್ಯಕ್ಕೆ ಬಳಸಲು ಖರೀದಿಸಿದ್ದು ಈ ಕಾರಣಕ್ಕಾಗಿ ಹಕ್ಕುಬದಲಾವಣೆ ತಿರಸ್ಕರಿಸಿರುವುದು ಸಮಂಜಸವಾಗಿರುತ್ತದೆ ಕಾರಣ ಕೆಳಕಂಡಂತೆ ಆದೇಶ

**ಮುಂದಿನ ಪುಟಕ್ಕೆ....**